# ಶ್ರೀಗೋಪಿಕಾಗೀತಾ

॥ ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀನರಹರಿರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯನಮಃ ॥ ಶ್ರೀಗುರುಭ್ಯೋನಮಃ ॥ ಹರಿಃ ॥ ಓಂ ॥

## ಅಥ ಶ್ರೀಗೋಪಿಕಾಗೀತಾ

## ಶ್ರೀಹರಿಕಥಾಮೃತಸಾರದ ಭಾವಪ್ರಕಾಶಿಕೆಯೆಂಬ ವ್ಯಾಖ್ಯಾನಕರ್ತರಾದ ಶ್ರೀಪದ್ಮನಾಭದಾಸರಿಂದ ರಚಿತವಾದ ಗೋಪಿಕಾಗೀತೆ

( ಉಪೋದ್ಘಾತ, ಶ್ಲೋಕಾರ್ಥ ಮತ್ತು ಗೂಢಾರ್ಥ ಸಹಿತ )

(ಸೂ. ಈ ವ್ಯಾಖ್ಯಾನವು ಹಿಂದೆ ಶ್ರೀ ಎಂ. ಮೂರ್ತಿರಾಯರೆಂಬುವರಿಂದ ಪ್ರಕಟವಾಗಿದ್ದು ಪ್ರಕಟನೆಯ ವಿವರಗಳು ತಿಳಿದಿಲ್ಲ. ಇದನ್ನು ಗಣಕೀಕರಿಸಲು ಶ್ರೀಮಧ್ವಾಂತರ್ಯಾಮಿನ್ ವಿಶ್ವಂಭರಮೂರ್ತಿಯು ನಿರ್ವಿಘ್ನವನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ.)

ಲೋಕಪ್ರಸಿದ್ಧವಾದ ಈ ಗ್ರಂಥವನ್ನು ಬಹುಮಂದಿ ಪಠನೆ ಮಾಡುತ್ತಿದ್ದರೂ ಇದರರ್ಥವನ್ನು ಎಲ್ಲರೂ ತಿಳಿಯುವುದು ಸಾಧ್ಯವಿಲ್ಲ. ಇದೊಂದು ಕೊರತೆಯನ್ನು ಪರಿಹರಿಸಬೇಕೆಂಬುದು ನನ್ನ ಉದ್ದೇಶವು. ಯಾವ ಸಂದರ್ಭದಲ್ಲಿ ಈ ಗೋಪಿಗೀತೆಯು ಆದುದೆಂಬುದನ್ನು ತಿಳಿಸುವುದಕ್ಕಾಗಿ ಇದರ ಹಿಂದಿನ ಕಥಾಸಂದರ್ಭಗಳು ಉಪೋದ್ಘಾತದಲ್ಲಿ ಬರಿಯಲ್ಪಟ್ಟಿದೆ. ಅದರಮುಂದೆ ಗೋಪೀಗೀತೆಯ ಶ್ಲೋಕವೂ ಅದರರ್ಥವೂ, ಅದರ ಮುಂದೆ ಗೋಪಿಯರಿಗೆ ಶ್ರೀಕೃಷ್ಣನು ಅಂಗಸಂಗವಿತ್ತುದು ದೋಷವೇ ಅಲ್ಲವೇ ಎಂಬ ವಿಚಾರವಾಗಿ ಆಕ್ಷೇಪಣೆ ಮತ್ತು ಸಮಾಧಾನಗಳನ್ನು ಬರೆದಿರುವುದು ಅಲ್ಲದೇ ಇದರ ವೇದಾಂತಾರ್ಥವೂ ಸಹ ಬರೆಯಲ್ಪಟ್ಟಿದೆ. ಇದರಲ್ಲಿರುವ ದೋಷಗಳನ್ನು ಬಿಟ್ಟು ಸಾರಗ್ರಹಣಮಾಡಿ ಉದಾರಾಶ್ರಯಕೊಟ್ಟು ರಕ್ಷಿಸಬೇಕೆಂದು ಕೋರುವ,

ಎಂ. ಮೂರ್ತಿರಾವ್.

(ಪ್ರಕಾಶಕರು)

## ॥ ಉಪೋದ್ಘಾತ ॥

ಶರತ್ಕಾಲದ ರಾತ್ರಿ, ಚಂದ್ರನಕಿರಣದಿಂದ ಪ್ರಕಾಶಮಾನವಾಗಿ ಯಮುನಾನದಿಯ ತೀರವು ಬಹಳ ರಮಣೀಯವಾಗಿ ಕಂಗೊಳಿಸುತ್ತಿತ್ತು. ಗೋಕುಲದಲ್ಲಿ ಗೋಪಿಯೋರ್ವಳು ಹಾಲು ಕಾಯಿಸುತ್ತಿದ್ದಳು, ಹಾಲುಕರೆಯುತ್ತಿದ್ದಳೋರ್ವಳು; ಪತಿಸುತಾದಿಗಳು ಭೋಜನಕ್ಕೆ ಕೂಡಿರಲು ಬಡಿಸುತ್ತಿದ್ದವಳೋರ್ವಳು ; ಉಣುತ್ತಿದ್ದವಳೋರ್ವಳು ಹೀಗೆ ಒಂದೊಂದು ಮನೆಯಲ್ಲೂ ಒಬ್ಬೊಬ್ಬರು ತಮ್ಮತಮ್ಮ ಮನೆಯ ಕೆಲಸವನ್ನು ಮಾಡಿಕೊಳ್ಳುತ್ತಿದ್ದರು. ಅವೆಲ್ಲವನ್ನೂ ಗಮನಿಸಲು ನಮಗೆ ಅವಕಾಶವಿಲ್ಲ. ಇದ್ದಕ್ಕಿದ್ದ ಹಾಗೆ ಒಂದು ಸುಸ್ವರವಾದ ವೇಣುಗಾನಧ್ವನಿಯು ಆ ಗೋಕುಲದಲ್ಲೆಲ್ಲಾ ವ್ಯಾಪಿಸಿ ಆ ಗೋಪಿಯರ ಮನಸ್ಸನ್ನಾವರಿಸಿತು. ಅಷ್ಟೇ ಅಲ್ಲ! ಗೋಪಿಕಾಸ್ತ್ರೀಯರೆಲ್ಲರೂ ಮೈಮರೆತರು. ಮಾಡುತ್ತಿದ್ದ ಕೆಲಸಗಳನ್ನು ಹಾಗೆಯೇ ಬಿಟ್ಟರು. ಅಳುತ್ತಿರುವ ಸಣ್ಣಸಣ್ಣಮಕ್ಕಳನ್ನೂ ಬಿಟ್ಟು ಓಡುತ್ತಿದ್ದರು. ಪತಿ ಮೊದಲಾದವರು ಎಷ್ಟು ತಡೆದರೂ ಹಿಂತಿರುಗಲಿಲ್ಲ. ಎಲ್ಲರೂ ಯಮುನಾ ನದಿಯ ತೀರಕ್ಕೆ ಬಂದು ಸೇರಿದರು. ಅಲ್ಲಿ ವೇಣುಗಾನವನ್ನು ಮಾಡುತ್ತಿದ್ದ ಶ್ರೀಕೃಷ್ಣನನ್ನು ನೋಡಿ ಪರಮಾನಂದ ಭರಿತರಾದರು.

ಶ್ರೀಕೃಷ್ಣ:- ಸುದತಿಯರೇ! ಈ ರಾತ್ರಿಹೊತ್ತಿನಲ್ಲಿ ನೀವೆಲ್ಲರೂ ಬರಲು ಕಾರಣವೇನು ?

ಗೋಪಿಕಾ:- ದೇವ! ನಿನ್ನನ್ನು ನೋಡಲು.

ಶ್ರೀಕೃಷ್ಣ:- ನೋಡಿದಿರಲ್ಲವೇ ? ಇನ್ನುನಿಲ್ಲಬಾರದು. ರಾತ್ರಿಕಾಲ, ಮಕ್ಕಳು ಅಳುತ್ತಿರುವರು; ಪತಿಗಳು ಅಣ್ಣತಮ್ಮಂದಿರು ಹುಡುಕುತ್ತಿರುವರು. ಬೇಗನೇ ಮನೆಗೆ ಹೋಗಿ ಸೇರಿಕೊಳ್ಳಿರಿ.

ಗೋಪಿಕಾ:- ಪ್ರಭೋ! ಹಾಗೆ ಹೇಳಬೇಡ. ನಾವು ಸರ್ವವಿಷಯಗಳನ್ನೂ ತ್ಯಜಿಸಿ ಪತಿಸುತಾದಿಗಳನ್ನೂ ಲೆಕ್ಕಿಸದೇ ನಿನ್ನ ಪಾದಮೂಲವೇ ಗತಿಯೆಂದು ನಂಬಿರುತ್ತೇವೆ. ನಮ್ಮನ್ನು ನೀನು ತ್ಯಾಗಮಾಡಿದರೆ ನಾವು ಇಲ್ಲೇ ಪ್ರಾಣವನ್ನು ಕಳೆದುಕೊಳ್ಳುತ್ತೇವೆ.

ಶ್ರೀಕೃಷ್ಣನು ಇವರ ದೃಢನಿಶ್ಚಯವಾದ ಭಕ್ತಿಗೆ ಸಂತುಷ್ಟನಾಗಿ ಬಹುದಿವಸದಿಂದ ತನ್ನನ್ನಾರಾಧಿಸಿ ವರವನ್ನು ಪಡೆದು ಅಂಗಸಂಗವನ್ನು ಬೇಡುತ್ತಿರುವ ಗೋಪಿಯರ ಮನೋಭೀಷ್ಟವನ್ನು ಪೂರೈಸಿದನು. ತಕ್ಷಣವೇ ಶ್ರೀಹರಿಯು, ತಮ್ಮ ರೂಪಲಾವಣ್ಯಗಳಿಗೆ ಮೆಚ್ಚಿ ಬಂದನೆಂದು ಗರ್ವವು ತಲೆದೋರಿತು. ತನ್ನ ಭಕ್ತರ ಗರ್ವವನ್ನು ಭಂಗಪಡಿಸುವುದೇ ಅವರಿಗೆ ಸುಖಸಾಧನವೆಂದರಿತು ಶ್ರೀಕೃಷ್ಣನು ಅಲ್ಲೇ ಕಣ್ಮರೆಯಾದನು. ಪಾಪ! ಅವರೇನು ಮಾಡ್ಯಾರು! ರಾತ್ರಿಕಾಲ, ದಿಕ್ಕು ತೋಚದಂತೆ ಆಯಿತು. ಇನ್ನೆಲ್ಲಿಯದು ಗರ್ವ? ಹುಚ್ಚಿಯರಂತೆ 'ನಮ್ಮ ನಂದಕುಮಾರನನ್ನು ಕಂಡಿರಾ' ಎಂದು ಗಿಡಮರಗಳನ್ನು ಕೇಳುತ್ತಾ ಹುಡುಕಾಡಿದರು. ಅಲೆದಲೆದು ಬೇಸತ್ತರು. ನಿರಾಶರಾದರು. ಅಷ್ಟರಲ್ಲೋರ್ವಳು ಇಗೋ! ಇಗೋ! ಹೆಜ್ಜೆ! ಹೆಜ್ಜೆ!

ಎಂದಳು. ಎಲ್ಲರೂ ಓಡುತ್ತಾ ಬಂದು ನೋಡಿದರು. ಮತ್ತು ಸ್ವಲ್ಪ ಆಶೆಯು ಹುಟ್ಟಿತು. ಆಹಾ! ನಮ್ಮ ನಾಥನ ಹೆಜ್ಜೆಗಳನ್ನು ಕಂಡೆವು. ಇನ್ನು ಇದೇ ಮಾರ್ಗವಾಗಿ ಮುಂದಕ್ಕೆ ಹೋದರೆ ಹೇಗಾದರೂ ಸಿಕ್ಕುವನೆಂದು ಮಾತನಾಡಿಕೊಳ್ಳುತ್ತಾ ಆ ಹೆಜ್ಜೆಯಮಾರ್ಗವಾಗಿ ಮುಂದೆ ಸಾಗಿದರು. ಸ್ವಲ್ಪ ದೂರದಲ್ಲಿ ಆ ಹೆಜ್ಜೆಯನ್ನು ಅನುಸರಿಸಿ ಹೋಗಿರುವ ಒಬ್ಬ ಹೆಂಗಸಿನ ಹೆಜ್ಜೆಗಳನ್ನು ಕಂಡರು. ಆಹಾ! ನಮ್ಮನ್ನು ಮೋಸಗೊಳಿಸಿ ಯಾವಳೋ ಶ್ರೀಕೃಷ್ಣನನ್ನು ಕರೆದೊಯ್ದಳೆಂಬ ಹೊಟ್ಟೆಕಿಚ್ಚಿನಿಂದ ದುಃಖವು ಮತ್ತೂ ಹೆಚ್ಚಿತು. ಅಳುತ್ತಾ ಹಾಗೆಯೇ ಮುಂದೆ ಹೋದರು. ಅಷ್ಟರಲ್ಲಿ ಒಬ್ಬ ಹೆಂಗಸಿನ ಆರ್ತಧ್ವನಿಯು ಕೇಳಿಸಿತು. ಇದೇನೆಂದು ಅವರು ಧ್ವನಿಯನ್ನು ಕಿವಿಗೊಟ್ಟು ಕೇಳಿದರು. ''ಹಾ! ನಾಥ! ಎಲೈ ರಮಣ! ಪ್ರಿಯ! ಎಲ್ಲಿದ್ದೀಯೆ? ಅನಾಥಳಾದ ನನ್ನೊಬ್ಬಳನ್ನೇ ಈ ವನದಲ್ಲಿ ಬಿಟ್ಟು ಹೋಗುವುದು ನಿನಗೆ ಉಚಿತವೇ ? ಸಖೇ! ನಿನ್ನ ಸನ್ನಿಧಿಯನ್ನು ತೋರಿಸು. ಎಂಬಾರ್ತಧ್ವನಿಯು ಸ್ಪಷ್ಟವಾಗಿ ಕಿವಿಯಲ್ಲಿ ಬಿದ್ದಿತು. ಆಹಾ! ನಮ್ಮನ್ನು ಮೋಸಗೊಳಿಸಿದವಳಿಗೆ ತಕ್ಕ ಪ್ರಾಯಶ್ಚಿತ್ತವೇ ಆಯಿತು, ಎಂದಂದುಕೊಂಡು ಇದ್ದದ್ದರಲ್ಲಿ ಸ್ವಲ್ಪಸಂತೋಷವನ್ನು ತಂದುಕೊಂಡರು. ಎಲ್ಲರೂ ಆರ್ತಧ್ವನಿಯಾಗುತ್ತಿದ್ದ ಸ್ಥಳಕ್ಕೆ ಬಂದು ಸಂಪಿಗೇ ಗಿಡದ ಕೊಂಬೆಯನ್ನು ಒಂದು ಕೈಯಿಂದ ಹಿಡಿದುಕೊಂಡು ಜೋಲಾಡುತ್ತಿರುವ ಗೋಪಿಯನ್ನು ಕಂಡು ಕೆಳಗಿಳಿಸಿ ನಡೆದದ್ದನ್ನು ವಿಚಾರಿಸಿದರು. ಆಗ ಗೋಪಿಯು ಹೇಳತೊಡ ಗಿದಳು. ಏನೆಂದರೆ- ' ಸಖಿಯರೇ! ಶ್ರೀಕೃಷ್ಣನು ನಿಮ್ಮೆಲ್ಲರನ್ನೂ ಬಿಟ್ಟು ನನ್ನೊಬ್ಬಳನ್ನೇ ಇಲ್ಲಿಗೆ ಕರೆತಂದನು. ಇನ್ನು ಕೇಳಬೇಕೇ ! ಆಗ ನನ್ನ ಸಂತೋಷಕ್ಕೆ ಪಾರವೆಲ್ಲಿಯದು? ಗೆಳತಿಯರೇ! ಯಾರಿಗಾದರೂ ಸುಖವೇ ಆಗಲಿ, ದುಃಖವೇ ಆಗಲಿ ಅತಿಯಾಗಬಾರದು, ಕಾಣಿರಿ! ನನಗೂ ಕೆಡುವ ಕಾಲ, ನನ್ನ ರೂಪಲಾವಣ್ಯಕ್ಕೆ ಮೆಚ್ಚಿ ನನಗೆ ವಶನಾದನೆಂಬ ಗರ್ವವು, ಸೂರ್ಯನನ್ನು ಮೇಘವು ಆವರಿಸಿದಂತೆ ನನ್ನನ್ನು ಬಲವಾಗಿ ಆವರಿಸಿತು. ನಾನು ಸುಮ್ಮನಿರದೇ ಪ್ರಿಯ! ಈ ಕಾಡಿನಲ್ಲಿ ನನ್ನನ್ನು ಎಷ್ಟುದೂರ ನಡೆಸಬೇಕೆಂದಿರುವೆ? ಇನ್ನುಮುಂದೆ ನಡೆಯಲು ನನ್ನಿಂದ ಆಗದೆಂದೆನು. ಹಾಗಾದರೆ ನನ್ನ ಹೆಗಲಮೇಲೆ ಕೂಡೆಂದನು. ನಾನದನ್ನು ನಿಜವೆಂದು ನಂಬಿ ಹೆಗಲೇರಿದೆನು. ಶ್ರೀಕೃಷ್ಣನು ಸ್ವಲ್ಪದೂರ ನನ್ನನ್ನು ಹೊತ್ತುಕೊಂಡು ಬಂದನು. ಈ ಗಿಡದಲ್ಲಿ ಪುಷ್ಪಗಳು ತುಂಬಿದ್ದವು. ನನ್ನಲ್ಲೂ ಗರ್ವವು ತುಂಬಿದ್ದಿತು. 'ಪ್ರಿಯ! ಈ ಗಿಡದಡಿಯಲ್ಲಿ ಕೊಂಚ ನಿಲ್ಲು ಪುಷ್ಪಗಳನ್ನು ಕೊಯ್ದುಕೊಳ್ಳುವೆನು. ಎಂದೆನು. ಅವನೂ ಹಾಗೆಯೇ ಮಾಡಿದನು. ನಾನು ಒಂದುಕೈಯಿಂದ ರೆಂಬೆಯನ್ನು ಹಿಡಿದುದೇ ತಡ, ಆ ಕಪಟಿಯು ಮಾಯವಾದನು' ಎಂದು ಹೇಳಿದಳು. ಗೋಪಿಯರು ಅದನ್ನು ಕೇಳಿ ಆಶ್ಚರ್ಯಭಯಚಕಿತರಾಗಿ ಇನ್ನು ಹೀಗೆ ಹುಡುಕುವುದರಿಂದ ಪ್ರಯೋಜನವಿಲ್ಲ. ಎಲ್ಲರೂ ಅವನನ್ನೇ ಶರಣಾಗತಿ ಹೊಂದೋಣವೆಂದು ನಿಶ್ಚಯಿಸಿ ಹಿಂದಿರುಗಿದರು. ಮತ್ತೂ ಯಮುನಾನದಿಯ ತೀರದಲ್ಲೇ ಬಂದು ಕೂತರು. ಶ್ರೀಕೃಷ್ಣನನ್ನು ಮತ್ತೂ ಕಾಣಬೇಕೆಂಬ ಲವಲವಿಕೆಯಿಂದ ಪತಿಸುತಾದಿಗಳನ್ನು ಸ್ಮರಿಸದೇ ಮೈಮರೆತು, ಶ್ರೀಕೃಷ್ಣನಲ್ಲೇ ಮನಸ್ಸನ್ನಿಟ್ಟು ಅವನಮಹಿಮೆಯನ್ನು ಹೊಗಳುತ್ತಾ ಎಲ್ಲರೂ ಒಂದಾಗಿ ಕೂಡಿ ಶ್ರೀಕೃಷ್ಣನನ್ನು ಸ್ತೋತ್ರಮಾಡಲು ಉಪಕ್ರಮಿಸಿದರು.

-:ಶ್ರೀಗೋಪಿಕಾ ಗೀತೆ:-

**ಜಯತಿ ತೇಧಿಕಂ ಜನ್ಮನಾ ವ್ರಜಃ । ಶ್ರಯತ ಇಂದಿರಾ ಸಾಧುತತ್ರಹಿ ।**
**ದಯಿತದೃಶ್ಯತಾಂ ತ್ವಾದಿದೃಕ್ಷತಾಂ । ತ್ವಯಿ ಗತಾಸವಸ್ತ್ವಾಂ ವಿಚಿನ್ವತೇ ॥ 1 ॥**

ವೇದಾಂತವಿಚಾರದಲ್ಲಿ ಅಧಿಕಾರವಿಲ್ಲದ ಮುಕ್ತಿಯೋಗ್ಯರಾದ ಸ್ತ್ರೀಯರಿಗೆ ಪರಮಾತ್ಮನ ಸಂಕೀರ್ತನವೇ ಹರಿಪ್ರೀತಿಕರವಾದ ಉಪಾಸನೆ ಎಂಬರ್ಥವನ್ನು ಸೂಚಿಸುತ್ತಾ ಗೋಪಿಕಾಸ್ತ್ರೀಯರ ಉಪಾಸನಾಕ್ರಮವನ್ನು ಈ ಅಧ್ಯಾಯದಲ್ಲಿ ಹೇಳುತ್ತಾರೆ.

ಎಲೈ ಕೃಷ್ಣ! ನಿನ್ನ ಅವತಾರದಿಂದ ಈ ಗೋಕುಲವು ಜಯಲಕ್ಷಣವಾದ ಉತ್ತಮ ತೇಜಸ್ಸಿನಿಂದ ಸರ್ವೋತ್ಕೃಷ್ಟವಾಗಿ ಶೋಭಿಸುತ್ತಿದೆ; ಅಷ್ಟೇ ಅಲ್ಲ; ನೀನಿಲ್ಲಿರುವುದರಿಂದ ನಿತ್ಯೈಶ್ವರ್ಯರೂಪಳಾದ ಲಕ್ಷ್ಮೀದೇವಿಯೂ ಕೂಡ ಈಗ ಗೋಕುಲವನ್ನಾಶ್ರಯಿಸಿರುವಳು. ಆದುದರಿಂದಲೇ ಈಗ ಗೋಕುಲವು ಹೆಚ್ಚಿನ ಐಶ್ವರ್ಯದಿಂದ ಶೋಭಿಸುತ್ತಿರುವುದು. ಎಲೈ ಪ್ರಿಯ! ಯಾವ ಜನರು ನಿನ್ನನ್ನು ನೋಡಬೇಕೆಂಬ ಇಚ್ಛೆಯುಳ್ಳವರಾಗಿ ಪ್ರಾಣವನ್ನು ನಿನ್ನಲ್ಲಿ ಸಮರ್ಪಿಸಿ ಹುಡುಕುತ್ತಿರುವರೋ ಅಂತಹಾ ನಿನ್ನ ಭಕ್ತರಾದ ನಮಗೆ ನಿನ್ನ ದರ್ಶನವನ್ನು ಕೊಡು.

**ವ್ರಜಜನಾರ್ತಿಹನ್ ವೀರಯೋಷಿತಾಂ । ನಿಜಜನಸ್ಮಯಧ್ವಂಸನಸ್ಮಿತ ।**
**ಭಜ ಸಖೇ ಭವೇ ಕಿಂಕರೀಃ ಸ್ಮ ನೋ । ಜಲರುಹಾನನಂ ಚಾರುದರ್ಶಯನ್ ॥ 2 ॥**

ಎಲೈ ಗೋಕುಲಜನ ಕಷ್ಟಹರಣ! ವೀರ! ನಿನ್ನವರಿಗುಂಟಾದ ಗರ್ವವನ್ನು ನಾಶಮಾಡಲರ್ಹವಾದ ಮಂದಹಾಸೋಪೇತಾ! (ಅಂದರೆ- ಇವನು ಯಾವಾಗಲೂ ನಗುತ್ತಿರುವನೆಂದು ನಂಬಲಾಗದು; ಭಕ್ತರಿಗೆ ಗರ್ವಬಂದಾಗ ಈ ನಗುಮುಖವೇ ಗರ್ವಭಂಗಕ್ಕೆ ಕಾರಣವಾಗುವುದು ಎಂದರ್ಥ.) ಕಾಮಸಮೃದ್ಧಿಯನ್ನು ಅಪೇಕ್ಷಿಸುತ್ತಿರುವ ನಮ್ಮ ಕಾಮವನ್ನು ಪೂರೈಸು. ಸಖೇ! ಪತಿಮೊದಲಾದವರನ್ನು ಬಿಟ್ಟು ಅರ್ಧರಾತ್ರಿಯಲ್ಲಿ

ವನಕ್ಕೆ ಬಂದಿರುವುದನ್ನು ಜ್ಞಾಪಕದಲ್ಲಿಡು. 'ಭವೇ ಭವೇ' ಜನ್ಮ ಜನ್ಮದಲ್ಲಿಯೂ ನಿನ್ನ ದಾಸಿಯರಾದ ನಮಗೆ ಸುಂದರವಾದ ಪದ್ಮದಂತಿರುವ ನಿನ್ನ ಮುಖವನ್ನು ತೋರಿಸಿ ನಮ್ಮನ್ನು ಪಾಲಿಸು ಅಥವಾ 'ಭವೇ' ನಮ್ಮನ್ನು ಬದುಕಿಸುವುದಕ್ಕೋಸ್ಕರ ನಿನ್ನ ಮುಖಕಮಲವನ್ನು ತೋರಿಸು. (ಇಲ್ಲವಾದರೆ ನಾವು ಪ್ರಾಣವನ್ನು ಕಳೆದುಕೊಳ್ಳುತ್ತೇವೆಂಬ ಭಾವನೆ.)

**ಶರದುದಾಶಯೇ ಸಾಧುಜಾತಸತ್ । ಸರಸಿಜೋದರ ಶ್ರೀಮುಷಾದೃಶಾ ।**

**ಸುರತನಾಥ ತೇ ಶುಲ್ಕದಾಸಿಕಾ । ವರದ ನಿಘ್ನತೋ ನೇಹ ಕಿಂ ವಧಃ ॥ 3 ॥**

ಎಲೈ ರತಿಚತುರ! 'ಶರತ್ಕಾಲಸಂಬಂಧವಾದ ಸರೋವರದಲ್ಲಿ ಭೂಸಂಬಂಧವಿಲ್ಲದೇ ಹುಟ್ಟಿ ಚೆನ್ನಾಗಿ ಅರಳಿರುವ ಕಮಲದಲ್ಲಿನ ದಳದ ಶೋಭೆಯನ್ನು ಧಿಕ್ಕರಿಸುವ ದೃಷ್ಟಿಯಿಂದ, ಬೆಲೆಗೆ ತೆಗೆದುಕೊಂಡಿರುವ ದಾಸಿಯರಂತಿರುವ ನಮ್ಮನ್ನು ನೋಡದೇ ಕೊಲ್ಲುವುದು(ನಮ್ಮ ಆಶಾಭಂಗಮಾಡಿ ಅರ್ಧರಾತ್ರಿಯಲ್ಲಿ ವನದಲ್ಲಿ ಬಿಟ್ಟುಹೋದುದು) ಕತ್ತಿ ಮೊದಲಾದ ಆಯುಧಗಳಿಂದ ಕೊಲ್ಲುವುದಕ್ಕಿಂತಲೂ ಹೆಚ್ಚಿನದಲ್ಲವೇ? ('ವರ್ಷಾಕಾಲದ ಮಳೆಯಿಂದ ಕೆರಕುಂಟೆಗಳೆಲ್ಲಾ ತುಂಬಿ ಕಲಕಿರುವ ನೀರು, ಶರತ್ಕಾಲದಲ್ಲಿ ನಿರ್ಮಲವಾಗಿ ಶೋಭಿಸುವುದು. ಆ ಕಾಲದ ಸರೋವರದೊಳಗಿನ ಕಮಲಗಳು ವಿಸ್ತಾರವಾದ ದಳಗಳಿಂದಲೂ, ಅತಿಶಯವಾದ ಕಾಂತಿಯಿಂದಲೂ ಶೋಭಿಸುವುದೆಂಬ ಭಾವನೆ.)

**ವಿಷಜಲಾಶಯಾದ್ವ್ಯಾಲರಾಕ್ಷಸಾತ್ । ವರ್ಷಮಾರುತಾದ್ವೈದ್ಯುತಾನಲಾತ್ ।**

**ವೃಷಮಯಾದ್ಭಯಾದ್ವಿಶ್ವತೋಮುಖಾತ್ । ವೃಷಭ ತೇ ವಯಂ ರಕ್ಷಿತಾ ಮುಹುಃ ॥ 4 ॥**

ಹಿಂದಕ್ಕೆ ವಿಷಯಜಲಪೂರ್ಣವಾದ ಯಮುನಾ ಮಡುವಿನ ಜಲಪ್ರಾಶನದಿಂದುಂಟಾದ ಮರಣದಿಂದಲೂ, ಕಾಲಿಯನೆಂಬ ಸರ್ಪದ ಭಯದಿಂದಲೂ, ಸುಳಿಗಾಳಿರೂಪದಿಂದ ಬಂದ ತೃಣಾವರ್ತನೆಂಬ ರಾಕ್ಷಸನಿಂದಲೂ, ಮಳೆಗಾಳಿಯಿಂದಲೂ, ಕಾಡುಗಿಚ್ಚಿನಿಂದಲೂ, ವತ್ಸಾಸುರ-ನಿಂದಲೂ, ಇಷ್ಟೇಕೆ ಸರ್ವತೋಮುಖವಾಗಿ ಬಂದಬಂದೆಲ್ಲಾ ವಿಪತ್ತುಗಳಿಂದಲೂ ನಮ್ಮನ್ನು ರಕ್ಷಿಸಿರುವೆ. ಎಲೈ ಸರ್ವೋತ್ತಮ! ಈಗಲೂ ಹಾಗೆಯೇ ನಮ್ಮನ್ನು ರಕ್ಷಿಬೇಕೆಂದು ಬೇಡಿಕೊಳ್ಳುತ್ತೇವೆ.

**ಸಖಲು ಗೋಪಿಕಾನಂದನೋ ಭವಾನ್ । ಅಖಿಲದೇಹಿನಾಮಂತರಾತ್ಮದೃಕ್ ।**

**ವಿಖನಸಾರ್ಚಿತೋ ವಿಶ್ವಗುಪ್ತಯೇ । ಸಖ ಉದೇಯಿವಾನ್ ಸಾತ್ವತಾಂ ಕುಲೇ ॥ 5 ॥**

ಸಖೇ! ನಾವು ನಿನ್ನನ್ನು ಕೇವಲ ಯಶೋದಾಪುತ್ರನೆಂದೇ ಭಾವಿಸಿಲ್ಲ. ಮತ್ತಾರೆಂದು ಭಾವನೆ ಅಂದರೆ ಎಲ್ಲಾ ಪ್ರಾಣಿಗಳ ಅಂತರಾತ್ಮವನ್ನು ಚೆನ್ನಾಗಿ ನೋಡುತ್ತಿರುವ ಪರಮಾತ್ಮನೇ ನೀನು. ಬ್ರಹ್ಮದೇವರಿಂದ(ವಿಖನಸ) ಪ್ರಾರ್ಥಿತನಾಗಿ ಪ್ರಪಂಚದ ರಕ್ಷಣೆಗಾಗಿ ಸಾತ್ವಿಕಕುಲದಲ್ಲಿ ಅವತಾರ-ಮಾಡಿರುವೆ ಎಂದು ಭಾವಿಸಿರುವೆವು.

**ವಿರಚಿತಾಭಯಂ ವೃಷ್ಣಿವರ್ಯ ತೇ । ಶರಣಮೀಯುಷಾಂ ಸಂಸೃತೇರ್ಭಯಾತ್ ।**

**ಕರಸರೋರುಹಂ ಕಾಂತ ಕಾಮದಂ । ಶಿರಸಿ ಧೇಹಿ ನಃ ಶ್ರೀಕರಗ್ರಹಂ ॥ 6 ॥**

ಎಲೈ ವೃಷ್ಣಿಕುಲೋತ್ತಮಾ! ಸಂಸಾರಭಯದಿಂದ ಉತ್ತೀರ್ಣರಾಗಬೇಕೆಂಬ ಇಚ್ಛೆಯಿಂದ ನಿನ್ನನ್ನು ಮೊರೆಹೊಕ್ಕ ಜನರಿಗೆ ಯಾವ ಕೈಯಿಂದ ಅಭಯಪ್ರದಾನ ಮಾಡಿದೆಯೋ, ಕಾಂತಾ! ಯಾವ ಕೈಯಿಂದ ಶ್ರೀದೇವಿಯ ಪಾಣಿಗ್ರಹಣಮಾಡಿದ್ದೆಯೋ ಅಂತಹಾ ಎಲ್ಲರ ಮನೋಭೀಷ್ಟವನ್ನು ಪೂರೈಸುವ ನಿನ್ನ ಕರಕಮಲವನ್ನು ನಮ್ಮ ತಲೆಯಮೇಲಿಡು.

**ಪ್ರಣತದೇಹಿನಾಂ ಪಾಪಕರ್ಶನಂ । ತೃಣಚರಾನುಗಂ ಶ್ರೀನಿಕೇತನಂ ।**

**ಫಣಿಫಣಾರ್ಪಿತಂ ತೇ ಪದಾಂಬುಜಂ । ಕೃಣುಕುಚೇಷು ನಃ ಕೃಂಧಿಹೃಚ್ಛಯಂ ॥ 7 ॥**

ನಮಸ್ಕರಿಸುತ್ತಿರುವ ಜನರ ಪಾಪವನ್ನು ನಾಶಮಾಡತಕ್ಕುದದಾಗಿಯೂ, ಗೋಗಳನ್ನನುಸರಿಸಿ ಹೋಗುತ್ತಿರುವುದಾಗಿಯೂ, ಶ್ರೀಲಕ್ಷ್ಮೀ ದೇವಿಗೆ ವಾಸಸ್ಥಾನವಾಗಿಯೂ, ಕಾಳೀಯನೆಂಬ ಸರ್ಪನ ಹೆಡೆಗಳನ್ನು ತುಳಿದುದಾಗಿಯೂ ಇರುವ ನಿನ್ನ ಪಾದಕಮಲವನ್ನು ನಮ್ಮ ಕುಚಗಳ ಮಧ್ಯದಲ್ಲಿಡು. ನಮ್ಮ ಕಾಮತಾಪವನ್ನು ಪರಿಹರಿಸು.

**ಮಧುರಯಾ ಗಿರಾ ವಲ್ಗುವಾಕ್ಯಯಾ । ಬುಧಮನೋಜ್ಞಯಾ ಪುಷ್ಕರೇಕ್ಷಣ ।**

**ವಿಧಿಕರೀರಿಮಾ ವೀರಮುಹ್ಯತಿ । ರಧರಸೀಧುನಾಪ್ಯಾಯಸ್ವ ನಃ ॥ 8 ॥**

ಎಲೈ ಕಮಲಾಕ್ಷ! ಮನೋಹರವಾದ ಸ್ವರದಿಂದ ಕೂಡಿದ ಬಹ್ವರ್ಥಪೂರ್ಣವಾದ ಮಿತಭಾಷೆಯಿಂದ ಜ್ಞಾನಿಗಳಿಗಾದರೂ ಹೃದ್ಯವಾದ

ಆದರಪೂರ್ಣವಾದ ನಿನ್ನ ವಾಕ್ಯಗಳಿಂದ ನಾವು ಮೋಹಿತರಾಗಿರುವೆವು. ಎಲೈ ವೀರಾ! ನಿನ್ನ ದಾಸಿಯರಾದ ನಮ್ಮನ್ನು ನಿನ್ನ ಅಧರಾಮೃತದಿಂದ ಆಪ್ಯಾಯನಮಾಡಿಸು (ನಮ್ಮನ್ನು ಬದುಕಿಸು).

**ತವಕಥಾಮೃತಂ ತಪ್ತಜೀವನಂ । ಕವಿಭಿರೀಡಿತಂ ಕಲ್ಮಷಾಪಹಂ ।**

**ಶ್ರವಣಮಂಗಲಂ ಶ್ರೀಮದಾತತಂ । ಭುವಿಗೃಣಂತಿ ತೇ ಭೂರಿದಾಜನಾಃ ॥ 9 ॥**

ನಿನ್ನ ಕಥಾಮೃತವು ಸಂಸಾರತಾಪದಿಂದ ತಪ್ತರಾದ ಜನರಿಗೆ ಜೀವನಪ್ರದವು. ಜ್ಞಾನಿಗಳಿಂದ ಸ್ತುತ್ಯವು, ಸಕಲ ಪಾಪಪರಿಹಾರಕವು, ಶ್ರವಣ-ಮಾತ್ರದಿಂದಲೇ ಮಂಗಲಪ್ರದವು. ಇಂತಹಾ ನಿನ್ನ ಕಥಾಮೃತವನ್ನು ಯಾರು ಪಾನಮಾಡುವರೋ ಅಂದರೆ ಕಥಾ ಶ್ರವಣಮಾಡುವರೋ ಅವರೇ ಸಕಲ ದುಃಖವನ್ನು ನಾಶಮಾಡಬಲ್ಲರು. ಅಂದರೆ ಅವರೇ ಪರಮಸುಖಿಗಳೆಂದರ್ಥ. ಅಥವಾ ಯಥೇಷ್ಟವಾದ ಹಿರಣ್ಯಾದಿಗಳನ್ನು ಕೊಡಬಲ್ಲರು. ಅಂದರೆ ಅವರೇ ಮಹದೈಶ್ವರ್ಯವಂತರೆಂದರ್ಥ.

**ಪ್ರಹಸಿತಂ ಪ್ರಿಯ ಪ್ರೇಮವೀಕ್ಷಣಂ । ವಿಹರಣಂ ಚ ತೇ ಧ್ಯಾನಮಂಗಲಂ ।**

**ರಹಸಿ ಸಂವಿದೋ ಯಾ ಹೃದಿಸ್ಪೃಶಃ । ಕುಹಕ ನೋ ಮನಃ ಕ್ಷೋಭಯಂತಿ ಹಿ ॥ 10 ॥**

ನಿನ್ನ ಕಥಾಮೃತಪಾನದಿಂದಲೇ ಸಂಸಾರತಾಪವು ಪರಿಹಾರವಾಗುವುದೆಂದಮೇಲೆ ಅಧರಾಮೃತಪಾನವನ್ನು ಏಕೆ ಬೇಡುವಿರೆಂದರೆ:- ಎಲೈ ಪ್ರಿಯ ಧ್ಯಾನಮಾಡುವವರಿಗೆ ಮಂಗಲಪ್ರದನಾದ ನಿನ್ನ ಮಂದಹಾಸವೂ, ಪ್ರೇಮದಿಂದ ನಿನ್ನ ನೋಟವೂ, ನಿನ್ನ ವಿಹಾರವೂ, ಎಲೈ ಕಪಟಿಯೇ! (ಪ್ರಣಯಕೋಪದಿಂದಾಡುವ ಮಾತಿದು) ಮನೋಜ್ಞವಾದ ಸುರತಸಂಬಂಧವಾದ ನಿನ್ನ ಏಕಾಂತಮಾತುಗಳು ಇವು ಒಂದೊಂದೂ ನಮ್ಮ ಮನಸ್ಸನ್ನು ಕುಂದಿಸುತ್ತಿರುವುದು. (ಆದುದರಿಂದಲೇ ಅಧರಾಮೃತವನ್ನು ಬೇಡುವೆವು ಎಂಬ ಭಾವನೆ.)

**ಚಲಸಿ ಯದ್ವ್ರಜಾಚ್ಚಾರಯನ್ಪಶೂನ್ । ನಲಿನಸುಂದರಂ ನಾಥ ತೇ ಪದಂ ।**

**ಶಿಲತೃಣಾಂಕುರೈಸ್ಸೀದತೀತಿ ನಃ । ಕಲಿಲತಾಂ ಮನಃ ಕಾಂತಗಚ್ಛತಿ ॥ 11 ॥**

ನಾಥ! ಗೋಕುಲವನ್ನು ಬಿಟ್ಟು ಗೋಗಳನ್ನು ಕಾಯುತ್ತಾ ಯಾವಾಗ ನೀನು ವನದಲ್ಲಿ ಸಂಚರಿಸುತ್ತಿರುವೆ, ಆಗ ಕೋಮಲವಾದ ನಿನ್ನ ಪಾದವು ಕಠಿನವಾದ ತುದಿ ಕತ್ತರಿಸಲ್ಪಟ್ಟ ತೃಣಾದಿಗಳಿಂದಲೂ, ಸಣ್ಣಸಣ್ಣ ಕಲ್ಲುಮುಳ್ಳುಗಳಿಂದಲೂ ಎಷ್ಟು ನೊಂದಿರುವುದೋ ಎಂದು ನಮ್ಮ ಮನಸ್ಸು ಬಹಳ ಕಲುಷಿತವಾಗಿರುವುದು. (ನೀನು ಪರಮಾತ್ಮನೆಂದು ನಾವು ಅರಿತವರಾದರೂ ನಿನ್ನ ಮೇಲಣ ಮೋಹದಿಂದ ನಿನಗೂ ವೇದನಾದಿಗಳು ಉಂಟೋ ಏನೋ ಎಂಬ ಸಂಶಯವು ಹುಟ್ಟುವುದೆಂಬ ಭಾವನೆ.)

**ದಿನಪರಿಕ್ಷಯೇ ನೀಲಕುಂತಲೈ । ರ್ವನರುಹಾನನಂ ಬಿಭ್ರದಾವೃತಂ ।**

**ವನರಜಶ್ವಲಂ ದರ್ಶಯನ್ಮುಹುಃ । ಮನಸಿ ನಃ ಸ್ಮರಂ ವೀರ ಯಚ್ಛಸಿ ॥ 12 ॥**

ಎಲೈ ವೀರಾ! ಸೂರ್ಯಾಸ್ತಮಯ ಕಾಲದಲ್ಲಿ ಮುಂಗುರುಳಿನಿಂದ ಶೋಭಿತವಾದ ಕಮಲವನ್ನು ಹೋಲುವ ಮುಖದಿಂದ ಕೂಡಿದ ನೀನು, ದನಗಳು ಮುಂದೆ ಹೋಗುವಾಗ ಸರ್ವತ್ರ ವ್ಯಾಪಿಸಿರುವ ವನಧೂಳಿಯನ್ನು ಮುಖದಲ್ಲಿ ತೋರಿಸುತ್ತಾ ವನದಿಂದ ಬರುವಾಗ ನಮಗೆ ನೂತನ ನೂತನವಾಗಿ ಕಾಮೋದ್ರೇಕವನ್ನು ಮಾಡುತ್ತಿರುವಿ.

**ಪ್ರಣತಕಾಮದಂ ಪದ್ಮಜಾರ್ಚಿತಂ । ಧರಣಿಮಂಡನಂ ಧ್ಯೇಯಮಾಪದಿ ।**

**ಚರಣಪಂಕಜಂ ಶಂತಮಂ ಚ ತೇ । ರಮಣ ನಸ್ತನೇಷ್ವರ್ಪಯಾಧಿಹನ್ ॥ 13 ॥**

ಎಲೈ ರಮಣ! ನಮಸ್ಕರಿಸುವವರ ಮನೋಭೀಷ್ಟವನ್ನು ಪೂರೈಸುವ ಬ್ರಹ್ಮದೇವರಿಂದ ಪೂಜಿತವಾದ, ಭೂಮಂಡಲಕ್ಕೆ ಅಲಂಕಾರ ಭೂತವಾದ ಆಪತ್ಕಾಲಕ್ಕೆ ಧ್ಯಾನಾರ್ಹವಾದ, ಎಲೈ ಮನೋದುಃಖನಾಶನ! ಪರಮಾನಂದಪ್ರದವಾದ ನಿನ್ನ ಪಾದಕಮಲವನ್ನು ನಮ್ಮ ಸ್ತನಗಳ ಮೇಲಿಡು.

**ಸುರತವರ್ಧನಂ ಶೋಕನಾಶನಂ । ಸ್ವರಿತವೇಣುನಾ ಸುಷ್ಟುಚುಂಬಿತಂ ।**

**ಇತರರಾಗವಿಸ್ಮಾರಣಂ ನೃಣಾಂ । ವಿತರ ವೀರ ನಸ್ತೇಧರಾಮೃತಂ ॥ 14 ॥**

ಎಲೈ ವೀರಾ! ಸುರತವಿಷಯಾಸಕ್ತಿಯನ್ನು ವೃದ್ಧಿಪಡಿಸುವ, ಸಕಲಶೋಕನಾಶಕರವಾದ, ಸುಸ್ವರಯುಕ್ತವಾದ ವೇಣುವಿನಿಂದ ಚೆನ್ನಾಗಿ ಚುಂಬಿತವಾದ, ಜನರಿಗೆ ಇತರವಿಷಯದಲ್ಲಿ ಆಸಕ್ತಿಯನ್ನು ಮರೆಯುವಂತೆ ಮಾಡಿಸುತ್ತಿರುವ ನಿನ್ನ ಅಧರಾಮೃತವನ್ನು ನಮಗೆ ಕೊಡು.

**ಅಟತಿ ಯದ್ಭವಾನಹ್ನಿಕಾನನಂ । ತ್ರುಟಿಯುಗಾಯತೇ ತ್ವಮಪಶ್ಯತಾಂ ।**

**ಕುಟಿಲಕುಂತಲಂ ಶ್ರೀಮುಖಂ ಚ ತೇ । ಜಡವದೀಕ್ಷತಾಂ ಪಕ್ಷ್ಮಕೃನ್ನದೃಶಾಂ ॥ 15 ॥**

ನೀನು ಯಾವ ಹಗಲುಕಾಲದಲ್ಲಿ ವನದಲ್ಲಿ ಸಂಚರಿಸುತ್ತಿರುವೆ. ಆ ಹಗಲಿನಲ್ಲಿ ನಿನ್ನನ್ನು ನೋಡದಿರುವ ನಮಗೆ ಅತ್ಯಲ್ಪವಾದ ಒಂದು ತ್ರುಟಿಕಾಲವು ಒಂದು ಮಹಾಯುಗವಾಗುವುದು. ಎಲೈ ರಮಣ! ಮುಂಗುರುಳಿನಿಂದ ಶೋಭಿತವಾದ ನಿನ್ನ ಮುಖವನ್ನು ರೆಪ್ಪೆಗಳಿಗೆ ವ್ಯಥೆಯನ್ನು ಕೊಡಿಸುತ್ತಾ ಬಣ್ಣದ ಗೊಂಬೆಗಳಂತೆ ರೆಪ್ಪೆಗಳನ್ನು ಮಿಟುಕಿಸದೇ ನೋಡುವಾಗ ನಮಗೆ ಬಹುಕಾಲವಾದರೂ ಅಲ್ಪಕಾಲದಂತೆ ಕಾಣುವುದು.

**ಪತಿಸುತಾನ್ವಯಂ ಭ್ರಾತೃಬಾಂಧವಾನ್ । ಅತಿವಿಲಂಘ್ಯ ತೇ ಹ್ಯಚ್ಯುತಾಗತಾಃ ।**
**ಗತಿವಿದಸ್ತವೋದ್ಗೀತಮೋಹಿತಾಃ । ಕಿತವಯೋಷಿತಃ ಕಸ್ತ್ಯಜೇನ್ನಿಶಿ ॥ 16 ॥**

ಹೀಗೆ ಪರಮಾತ್ಮನಲ್ಲಿ ರತಿವಿಹಾರಕ್ಕೆ ಇದೇ ಕಾಲವೆಂದು ವಿಜ್ಞಾಪಿಸಿಕೊಂಡು, ಈಗ ತಮ್ಮನ್ನು ವನದಲ್ಲಿ ಬಿಟ್ಟು ಹೋದನೆಂಬ ಪ್ರಣಯ ಕೋಪದಿಂದ ಕಾಮಮುಗ್ಧರಾದ ಗೋಪಿಯರು ಅಧಿಕ್ಷೇಪಿಸಿ ಅನ್ನುತ್ತಾರೆ. - ಎಲೈ ಅಚ್ಯುತಾ ! ಗಾನಜ್ಞರಾದ ನಾವು ನಿನ್ನ ಉತ್ಕೃಷ್ಟವಾದ ವೇಣು ಗಾನದಿಂದ ಮೋಹಿತರಾಗಿ ಪತಿಗಳು, ಮಕ್ಕಳುಗಳು, ಅಣ್ಣತಮ್ಮಂದಿರು, ಬಂಧುಗಳು ಇವರನ್ನೆಲ್ಲರನ್ನೂ ಅತಿಕ್ರಮಿಸಿ ನಿನ್ನಲ್ಲಿಗೆ ಬಂದೆವು. ಆದರೇನಾಯಿತು ! ಎಲೈ ಕಪಟಿ ಇಂತಹ ರಾತ್ರಿಕಾಲದಲ್ಲಿ ಅಡವಿಯಲ್ಲಿ ಹೆಂಗಸರನ್ನು ಹೀಗೆ ಯಾರುತಾನೆ ಬಿಟ್ಟುಹೋಗುವರು?

**ರಹಸಿ ಸಂವಿದಂ ಹೃಚ್ಛಯೋದಯಂ । ಪ್ರಹಸಿತಾನನಂ ಪ್ರೇಮವೀಕ್ಷಣಂ ।**
**ಬೃಹದುರಃ ಶ್ರಿಯೋ ವೀರವೀಕ್ಷ್ಯತೇ । ಮುಹುರತಿಸ್ಪೃಹಾ ಮುಹ್ಯತೇ ಮನಃ ॥ 17 ॥**

ಹೆಚ್ಚಿಗೆ ಹೇಳಿಕೊಂಡೇನು, ಮುಖ್ಯವಾಗಿ ನಮ್ಮವಸ್ಥೆ ಹೀಗಿದೆಯೆಂದು ವಿಜ್ಞಾಪಿಸುತ್ತಾರೆ. ಕಾಮೋದ್ರೇಕವನ್ನು ವೃದ್ಧಿಪಡಿಸುತ್ತಿರುವ ನಿನ್ನ ಏಕಾಂತ ಮಾತುಗಳು, ಮಂದಹಾಸೋಪೇತವಾದ ನಿನ್ನ ಮುಖ, ಪ್ರೇಮದಿಂದ ನೋಡುವ ನಿನ್ನ ನೋಟ, ಎಷ್ಟುನೋಡಿದರೂ ತೃಪ್ತಿಯಿಲ್ಲದೆ ನೋಡುತ್ತಾ ಪ್ರತಿಕ್ಷಣದಲ್ಲೂ ವಿಶೇಷಕಾಂತಿದ್ಯೋತಕವಾದ ನಿನ್ನ ವಕ್ಷಸ್ಥಳದ ಶೋಭಾ ಇವುಗಳನ್ನು ನೋಡಿ ಪುನಃ ಪುನಃ ನೆನೆನೆನೆದು ನಮ್ಮ ಮನಸ್ಸು ಮೋಹಹೊಂದುತ್ತಿರುವುದು.

**ವ್ರಜವನೌಕಸಾಂ ವ್ಯಕ್ತಿರಂಗ ತೇ । ವೃಜಿನಹಂತ್ರ್ಯಲಂ ವಿಶ್ವಮಂಗಲಂ ।**
**ಭಜಮನಾಕ್ಚನಸ್ತ್ವತ್ಸ್ಪೃಹಾತ್ಮನಾಂ । ಸ್ವಜನಹೃದ್ರುಜಾಂ ಯನ್ನಿಷೂದನಂ ॥ 18 ॥**

ನಿನ್ನ ಅವತಾರವು, ಗೋಕುಲವಾಸಿಗಳು, ವನವಾಸಿಗಳು ಅಂದರೆ ಅರ್ಥಾತ್ ವಾನಪ್ರಸ್ಥರು, ಸನ್ಯಾಸಿಗಳು, ತೀರ್ಥವಾಸಿಗಳು ಮೊದಲಾದ ಎಲ್ಲರಿಗೂ ಸಕಲ ಕಷ್ಟಗಳನ್ನೂ ಪರಿಹರಿಸುವುದು. ಪ್ರಪಂಚಕ್ಕೆ ಮಂಗಳಕರವು. ಎಲೈ ಪ್ರಿಯಾ! ನಿನ್ನಲ್ಲೇ ಮನಸ್ಸನ್ನಿಟ್ಟು ನಿನ್ನನ್ನು ನೋಡಬೇಕೆಂದು ಹಾರೈಸುತ್ತಿರುವ ನಮ್ಮನ್ನು ಸ್ವಲ್ಪವಾದರೂ ಭಜಿಸು= ಅಂದರೆ ನಮ್ಮ ಕಣ್ಣಿಗೆ ಗೋಚರಿಸು. ನಿನ್ನ ದರ್ಶನವೇ ನಮ್ಮ ಮನೋವ್ಯಾಧಿಗೆ ಔಷಧವು॥

**ಇತಿ ಗೋಪ್ಯಃ ಪ್ರಗಾಯಂತ್ಯಃ ಪ್ರಲಪಂತ್ಯಶ್ಚ ಚಿತ್ರಧಾ । ರುರುದುಃ ಸುಸ್ವರಂ ರಾಜನ್ ಕೃಷ್ಣದರ್ಶನ ಲಾಲಸಾಃ ॥ 1॥**
**ತಾಸಾಮಾವಿರಭೂಚ್ಛೌರಿಃ ಸ್ಮಯಮಾನ ಮುಖಾಂಬುಜಃ । ಪೀತಾಂಬರಧರಃ ಸ್ರಗ್ವೀ ಸಾಕ್ಷಾನ್ಮನ್ಮಥಮನ್ಮಥಃ ॥ 2 ॥**

ಹೀಗೆ ಗೋಪಿಯರು ಗಾನರೂಪವಾಗಿ ಶ್ರೀಕೃಷ್ಣನ ಮಹಿಮೆಯನ್ನು ವರ್ಣಿಸುತ್ತಾ ಶ್ರೀಕೃಷ್ಣನನ್ನು ನೋಡುವ ಲವಲವಿಕೆಯಿಂದ ಸುಸ್ವರದಿಂದ ರೋದನೆ ಮಾಡುತ್ತಿದ್ದರು. ಶ್ರೀಕೃಷ್ಣನು ಮಂದಹಾಸವಿಶಿಷ್ಟವಾದ ಮುಖಕಮಲದಿಂದ ಕೂಡಿ ಪೀತಾಂಬರಧಾರಿಯಾಗಿ ಕಮಲಮಾಲಿಕೆಯಿಂದ ಅಲಂಕೃತನಾಗಿ ಮನ್ಮಥನ ಮನಸ್ಸನ್ನೂ ಮಥನಮಾಡುವ ಮನೋಹರ ರೂಪದಿಂದ ಶೋಭಿಸುತ್ತಾ ಆ ಗೋಪಿಯರ ಮುಂದೆ ನಿಂತನು॥ ಇದ್ದಕ್ಕಿದ್ದ ಹಾಗೆ ತಮ್ಮ ಮುಂದೆ ಬಂದುನಿಂತ ಪ್ರಿಯನನ್ನು ಕಂಡು ಗೋಪಿಯರು ಪ್ರಾಣವಿಲ್ಲದ ಶರೀರದಲ್ಲಿ ಪ್ರಾಣಪ್ರಾಪ್ತಿಯಾದರೆ ಹೇಗೋ ಹಾಗೆ ಎಲ್ಲರೂ ಏಕಕಾಲದಲ್ಲಿ ಎದ್ದು ಪ್ರಿಯನನ್ನು ಆಲಿಂಗನಮಾಡಿಕೊಂಡು ಪರಮಾನಂದ ಹೊಂದಿದರು.

॥ ಇತಿ ಶ್ರೀಮದ್ಭಾಗವತೇ ದಶಮಸ್ಕಂಧೇ ಗೋಪೀಗೀತಂ ನಾಮೈಕೋನತ್ರಿಂಶೋಧ್ಯಾಯಃ॥

ಇಲ್ಲಿಗೆ ಗೋಪೀಗೀತಾವು ಸಮಾಪ್ತವಾಯಿತು.

## (ಶ್ರೀಕೃಷ್ಣನು ಗೋಪಿಕಾಸ್ತ್ರೀಯರಿಗೆ ಅಂಗಸಂಗವನ್ನಿತ್ತ ವಿಷಯದಲ್ಲಿ ಭಾಗವತೋಕ್ತ ಆಕ್ಷೇಪ-ಸಮಾಧಾನ)

ರಾಜಾ:- ಋಷಿವರ್ಯ ! ಶ್ರೀಪರಮಾತ್ಮನು ಧರ್ಮವನ್ನು ಸಂಸ್ಥಾಪಿಸುವುದಕ್ಕಾಗಿಯೂ, ಅಧರ್ಮ ನಾಶಕ್ಕಾಗಿಯೂ ಅಂಶದಿಂದ ಭೂಮಿಯಲ್ಲಿ ಅವತರಿಸಿರುವನು. ಮತ್ತು ಧರ್ಮವನ್ನು ಉಪದೇಶಮಾಡುವವನೂ, ಅನುಷ್ಠಾನಮಾಡುವವನೂ ತಾನೇ ಆಗಿರುವನು. ಭಗವದ್ಗೀತೆಯಲ್ಲಿ, 'ಎಲೈ ಪಾರ್ಥ! ನಾನುಕರ್ಮಗಳನ್ನು ಮಾಡುತ್ತಿರುವೆನು, ಆದರೂ ಕರ್ಮದ ಫಲಾಪೇಕ್ಷೆಯು ನನಗಿಲ್ಲ, ನಾನು ಕರ್ಮಗಳನ್ನು ಬಿಟ್ಟರೂ ಅದರಿಂದ

ಆಗುವ ಪುಣ್ಯಪಾಪರೂಪವಾದ ಲಾಭನಷ್ಟಗಳೂ ನನಗಿಲ್ಲ. ಹಾಗಾದರೆ ನೀನು ಕರ್ಮಗಳನ್ನು ಮಾಡುವುದೇತಕ್ಕೆನ್ನುವೆಯೋ ಹೇಳುವೆನು ಕೇಳು. ನಾನು ಕರ್ಮಮಾಡದಿದ್ದರೆ ಲೋಕದಲ್ಲಿ ಯಾರೂ ಕರ್ಮವನ್ನು ಮಾಡುವುದಿಲ್ಲ. ಆಗ ಜನರು ಅಜ್ಞಾನವೆಂಬ ಕತ್ತಲಿನಲ್ಲಿ ಬಿದ್ದು ಎಂದಿಗೂ ಮುಕ್ತಿಯಿಲ್ಲದೇ ಕಷ್ಟಪಡುವರು. ನಾನು ಕರ್ಮಗಳನ್ನು ಮಾಡಿದರೆ ಅದರಂತೆಯೇ ಆಚರಿಸುವರು. ಆದುದರಿಂದಲೇ ನಾನು ಕರ್ಮವನ್ನು ಮಾಡುವೆನು ಅರ್ಜುನ ! ಹಾಗೆ ನೀನೂ ಲೋಕಸಂಗ್ರಹದ ಉದ್ದೇಶ್ಯದಿಂದಲಾದರೂ ಕರ್ಮವನ್ನು ಮಾಡು' ಎಂದು ಶ್ರೀಕೃಷ್ಣನು ಅರ್ಜುನನಿಗೆ ಉಪದೇಶ ಮಾಡಿರುವನು. ಹೀಗೆ ಲೋಕಸಂಗ್ರಹಕ್ಕಾಗಿ ಸತ್ಕರ್ಮಗಳನ್ನು ಮಾಡುವ ಪರಮಾತ್ಮನು ಪರಸ್ತ್ರೀಗಮನರೂಪವಾದ ಇಂತಹಾ ಲೋಕನಿಂದ್ಯವಾದ ಕಾರ್ಯವನ್ನೇಕೆ ಮಾಡಿದನು? ಇದರಿಂದ ಆತ್ಮಾರಾಮನಾದ ಪರಮಾತ್ಮನಿಗೆ ಸ್ವಾರ್ಥವೂ ಇಲ್ಲ, ಪರಾರ್ಥವೆಂದರೂ ಅನರ್ಥವೇ. ಹೀಗಿರಲು ಇಂಥಾ ನೀಚಕೃತ್ಯವನ್ನು ಮಾಡಿದ ಶ್ರೀಪರಮಾತ್ಮನ ಅಭಿಪ್ರಾಯವೇನು?

ಶ್ರೀಶುಕಾಚಾರ್ಯರು:- ರಾಜಾ! ಶ್ರೀಪರಮಾತ್ಮನು ಸ್ವಾರ್ಥಪರನಾಗಿ ಯಾವ ಕಾರ್ಯವನ್ನಾದರೂ ಮಾಡುವುದಿಲ್ಲ. ಹಿರಣ್ಯಕಶಿಪು ಮೊದಲಾದ ಪಾಪಿಗಳನ್ನು ಕೊಂದುದೂ, ಪ್ರಹ್ಲಾದಾದಿ ಪುಣ್ಯವಂತರನ್ನು ರಕ್ಷಣಮಾಡಿದುದು ಹೇಗೆ ಕೇವಲ ಪರಾರ್ಥವೋ, ಹಾಗೆಯೇ ಗೋಪಿಕಾಸ್ತ್ರೀಯರನ್ನು ಉದ್ಧಾರಮಾಡುವುದಕ್ಕಾಗಿಯೇ ಅವರಿಗೆ ಅಂಗಸಂಗವನ್ನಿತ್ತುದು.

ರಾಜಾ:- ಹೇಗೆ ಉದ್ಧಾರ! ಸತಿಯರಿಗೆ ಪರಪುರುಷನ ಸಂಗವು ಮಹಾಪಾತಕಸಾಧನವಲ್ಲವೇ?

ಶ್ರೀಶುಕಾಚಾರ್ಯರು:- ಹೌದು, ಆದರೆ ಅದು ಈ ಗೋಪಿಯರ ವಿಷಯವಲ್ಲ.

ರಾಜಾ:- ಅದೇಕೆ?

ಶ್ರೀಶುಕಾ:- ಇವರು ಪೂರ್ವಜನ್ಮದಲ್ಲಿ ಅಪ್ಸರಸ್ತ್ರೀಯರು ಅಂದರೆ, ಸ್ವರ್ಗಲೋಕದ ವೇಶ್ಯೆಯರು. ಇವರಿಗೆ ಪರಮಾತ್ಮನ ಅಂಗಸಂಗದಿಂದಲೇ ಮೋಕ್ಷವಾಗಬೇಕಲ್ಲದೇ ಬೇರೆ ಮಾರ್ಗವಿಲ್ಲ. ಅದಕ್ಕಾಗಿ ಇವರು ಪರಮಾತ್ಮನನ್ನು ಕುರಿತು ಬಹುಕಾಲ ತಪಸ್ಸು ಮಾಡಿದರು. ಆಗ ಶ್ರೀಪರಮಾತ್ಮನು 'ನೀವೆಲ್ಲರೂ ಗೋಕುಲದಲ್ಲಿ ಹುಟ್ಟುವಿರಿ, ಆಗ ನಾನು ಕೃಷ್ಣಾವತಾರಮಾಡಿ ಉಪನಯನವಾಗುವದಕ್ಕೆ ಮುಂಚಿತವಾಗಿಯೇ ನಿಮಗೆ ಅಂಗಸಂಗ ವನ್ನು ಕೊಡುವೆನು' ಎಂದು ಆ ಅಪ್ಸರಸ್ತ್ರೀಯರಿಗೆ ವರವನ್ನು ಕೊಟ್ಟಿದ್ದನು. ಆದುದರಿಂದಲೇ ಗೋಪಿಯರು ಕಾಮಸಹಿತವಾದ ಭಕ್ತಿಯನ್ನು ಮಾಡುತ್ತಿರುವರು. ಇವರು ಶ್ರೀಕೃಷ್ಣನನ್ನು ಸಾಮಾನ್ಯಪುರುಷನೆಂದು ಭಾವಿಸಲಿಲ್ಲ. ಸಾಕ್ಷಾತ್ಪರಮಾತ್ಮನೆಂದೇ ಭಾವಿಸಿ ನಿಜವಾದ ಭಕ್ತಿಯನ್ನು ಮಾಡುತ್ತಿದ್ದರು. ಇವರ ಭಕ್ತಿಗೆ ಮೆಚ್ಚಿ ಪರಮಾತ್ಮನು ಅಂಗಸಂಗವನ್ನಿತ್ತನಲ್ಲದೇ ಕಾಮಿಯಾಗಿ ಅವರನ್ನು ಮುಟ್ಟಲಿಲ್ಲ. ಬರೇ ಇಂದ್ರಿಯಪ್ರೀತಿಗಾಗಿ ಅವರೂ ಭಜಿಸಲಿಲ್ಲ. ಆದ್ದರಿಂದ ಈ ಗೋಪಿಯರಿಗೆ ಮುಕ್ತಿಸಾಧನವಾಯಿತಲ್ಲದೇ ಪಾಪಸಾಧನವಲ್ಲ.

ರಾಜಾ:- ದ್ವಿಜವರ್ಯ! ಇರಲಿ ಇವರು ವೇಶ್ಯೆಯರಾಗಿದ್ದ ಕಾಲದಲ್ಲಿ ಪರಪುರುಷನ ಸಂಗ ಬಾಧಕವಲ್ಲ. ಕುಲಸ್ತ್ರೀಯರಾಗಿ ಜನಿಸಿ, ಮದುವೆಯಾಗಿ ಪರಪುರುಷನ ಸಂಗವು ಪಾತಕವಲ್ಲವೇ?

ಶ್ರೀಶುಕಾ:- ರಾಜಶ್ರೇಷ್ಠ! ಪರರಸಂಗವೇನೋ ಪಾತಕವೇ. ಆದರೆ ಅವರಿಗೆ ಅಂತಹಾ ಪ್ರಸಂಗಕ್ಕೆ ಕಾರಣವಿಲ್ಲ.

ರಾಜ:- ಅದು ಹೇಗೆ?

ಶ್ರೀಶುಕಾ:- ಎಲೈ ವಿಷ್ಣುರಾತ! ಜೀವನು ಅಸ್ವತಂತ್ರನು, ಜೀವನೊಳಗಿದ್ದು ಸಕಲಕಾರ್ಯವನ್ನೂ ಮಾಡಿಸುವವನೂ ಮಾಡುವನೂ ಪರಮಾತ್ಮನೇ. ಆದುದರಿಂದ ಗೋಪಿಯರ ಪತಿಜೀವರೊಳಗಿದ್ದು ಪತಿರೂಪದಿಂದ ಯಾವ ಪರಮಾತ್ಮನು ನಿತ್ಯದಲ್ಲೂ ಗೋಪಿಯರಿಗೆ ಸುಖವನ್ನು ಕೊಡಿಸುತ್ತಿದ್ದನೋ ಅದೇ ಪರಮಾತ್ಮನೇ ಈಗ ಕೃಷ್ಣರೂಪದಿಂದ ಸುಖವನ್ನಿತ್ತನು. ಆದುದರಿಂದ ಅನ್ಯಸಂಗದೋಷವು ಇವರಿಗೆ ಇಲ್ಲ.

ರಾಜ:- ಹಾಗಾದರೆ ಯಾವ ಸ್ತ್ರೀಯರಿಗಾದರೂ ಬಾಧಕವೇನು? ಪತಿಯೊಳಗೂ , ಜಾರನೊಳಗೂ ಇರುವ ಪರಮಾತ್ಮನು ಒಬ್ಬನೇ. ಜೀವನೋ ಅಸ್ವತಂತ್ರನು, ಜಾರಪುರುಷನೊಳಗಿದ್ದು ಸುಖವನ್ನು ಕೊಡಿಸುವವನೂ ಪರಮಾತ್ಮನೇ, ಆದುದರಿಂದ ಯಾವ ಸ್ತ್ರೀಯರಿಗಾದರೂ ಪರಪುರುಷನ ಸಂಗದಿಂದ ಪರಮಾತ್ಮನ ಸಂಗದಂತೆಯೇ ಭಾವಿಸಬೇಕಾಯಿತು. ಹೀಗಿರಲು ಜಾರಿಣಿಸ್ತ್ರೀಯರನ್ನೇಕೆ ದೂಷಿಸಬೇಕು?

ಶ್ರೀಶುಕಾ:- ರಾಜಾ! ಕೇಳು ಜೀವನು ಅಸ್ವತಂತ್ರನಾದರೂ ಭಗವದನುಗ್ರಹದಿಂದ ಶ್ರೀಹರಿಯು ಒಳಗಿದ್ದು ಮಾಡಿದುದನ್ನು ತಾನೂ ಮಾಡಿ ಪುಣ್ಯಪಾಪಗಳಿಗೆ ಭಾಗಿಯಾಗುವನು. ಆದುದರಿಂದ ಪರಪುರುಷನಸಂಗವು ಸ್ತ್ರೀಯರಿಗೆ ಇಬ್ಬರು ಜೀವರ ಸಂಸರ್ಗವು ಆಗುವುದರಿಂದ ಬಾಧಕವು. ಪರಮಾತ್ಮನ ಸಂಗವು ಪತಿರೂಪದಿಂದ ಎಲ್ಲ ಸ್ತ್ರೀಯರಿಗೂ ಆಗುವುದು. ಅದು ಬಾಧಕವಲ್ಲ. ಗೋಪಿಯರಿಗೆ ಎರಡನೇ ಜೀವನ ಸಂಸರ್ಗವಿಲ್ಲ. ಪತ್ಯಂತರ್ಗತ ಪರಮಾತ್ಮನೇ ಶ್ರೀಕೃಷ್ಣರೂಪವನ್ನು ತೋರಿಸಿದನು. ಆದುದರಿಂದ ಇವರಿಗೆ ದೋಷವಿಲ್ಲ.

## ಶ್ರೀಗೋಪಿಕಾಗೀತಾ

ರಾಜಾ:- ಗೋಪಿಯರು ರಾತ್ರಿಯಲ್ಲಿ ವೇಣುಗಾನಧ್ವನಿಯು ಕಿವಿಗೆ ಬಿದ್ದಕೂಡಲೇ ಮಾಡುತ್ತಿದ್ದ ಕೆಲಸಗಳನ್ನು ಬಿಟ್ಟು ಓಡಿಹೋಗುತ್ತಿದ್ದರು. ಇವರ ಪತಿ ಮೊದಲಾದವರು ಇದನ್ನು ನೋಡುತ್ತ ಸುಮ್ಮನೇ ಹೇಗಿದ್ದರು?

ಶ್ರೀಶುಕಾ:- ನೃಪವರ್ಯ! ಅಘಟ್ಯಘಟನಾಶಕ್ತಿಯಿಂದಲೂ, ಆಶ್ಚರ್ಯಮಹಿಮೆಯಿಂದಲೂ ಪೂರ್ಣನಾದ ಶ್ರೀಪರಮಾತ್ಮನ ಸಂಪೂರ್ಣಾನುಗ್ರಹ ವುಳ್ಳವರಿಗೆ ಇದೇನಾಶ್ಚರ್ಯ! ಗೋಪಾಲಕರು ತಂತಮ್ಮ ಸತಿಮೊದಲಾದವರನ್ನು ಮನೆಯಲ್ಲಿರುವುದಾಗಿಯೇ ಭಾವಿಸಿದ್ದರೇ ಹೊರತು ಮನೆಯಲ್ಲಿಲ್ಲ ವೆಂದು ಯಾರಿಗೂ ಗೊತ್ತಿಲ್ಲ. ಶ್ರೀಕೃಷ್ಣನು, ತನ್ನಲ್ಲಿಗೆ ಎಷ್ಟುಮಂದಿ ಗೋಪಿಯರು ಬಂದಿರುವರೋ ಅಷ್ಟುಮಂದಿ ಗೋಪಿಯರನ್ನು ಪ್ರತಿಸೃಷ್ಟಿಮಾಡಿ ಅವರವರ ಮನೆಯಲ್ಲಿರಿಸಿದ್ದನು. ಆದುದರಿಂದ ಯಾರಿಗೂ ತಮ್ಮ ಸ್ತ್ರೀಯರಮೇಲೆ ಸಂಶಯವೇ ಇರಲಿಲ್ಲ.

॥ ಸಮಾಪ್ತವಾದುದು ॥

ಸಾಮಾನ್ಯವಾಗಿ ಪುರಾಣಗಳಲ್ಲಿ ಭಕ್ತಿ ಜ್ಞಾನವೈರಾಗ್ಯ ಇವುಗಳನ್ನು ಜನರಿಗೆ ಹುಟ್ಟಿಸುವುದಕ್ಕಾಗಿಯೇ ಭಗವದವತಾರ ಚರಿತ್ರೆಗಳು, ದುಷ್ಟನಿಗ್ರಹ ಭಕ್ತರಪರಿಪಾಲನ ಮೊದಲಾದವುಗಳನ್ನು ವರ್ಣಿಸಿರುವರು. ಇದಲ್ಲದೇ ಪುರಾಣಗಳಿಗೆ ವೇದಾಂತ ಪರವಾದ ಅರ್ಥವೂ ಇರುವುದು. ಅದರಲ್ಲಿ ಗೋಪಿಯರು ಕೃಷ್ಣನ ಅಂಗಸಂಗವನ್ನು ಹೊಂದಿದ ವಿಚಾರವಾಗಿ ಈ ಗ್ರಂಥದ ಆದಿಭಾಗದಲ್ಲಿ ಉಪೋದ್ಘಾತವೆಂದು ಕಥಾ ಸಂಗ್ರಹವು ಬರೆಯಲಾಗಿದೆ. ಅದರ ವೇದಾಂತಾರ್ಥವನ್ನು ಭಗವದನುಗ್ರಹದಿಂದ ನನ್ನ ಬುದ್ಧಿಗೆ ಗೋಚರವಾದಷ್ಟು ಇಲ್ಲಿ ಸೂಚಿಸುವೆನು.

### ವೇದಾಂತಾರ್ಥವು.

ಇದರೊಳಗಿನ ಪಾತ್ರಗಳು:- ಗೋಕುಲ ; ಗೋವುಗಳು; ಗೋಪಾಲಕರು; ಗೋಪಿಕಾಸ್ತ್ರೀಯರು ; ಕೃಷ್ಣ , ಯಮುನಾ ನದಿ; ವನ, ಮೊದಲಾದವು.

**ಗೋಕುಲ:-** ಗೋ ಎಂದರೆ ಸಾಮಾನ್ಯವಾಗಿ ವಾಕ್ಯಗಳಿಗೆ ಹೆಸರಾದರೂ ಇಲ್ಲಿ ವಿಶೇಷಾರ್ಥದಿಂದ ವಿಧಿನಿಷೇಧರೂಪವಾದ ಶ್ರುತಿ ಸ್ಮೃತಿವಾಕ್ಯವೆಂದರ್ಥ. ಕುಲವೆಂದರೆ ಸಮೂಹ, ಗರ್ಭಾದಾನ ಮೊದಲುಗೊಂಡು ಅಂತ್ಯೇಷ್ಟಿಯವರೆವಿಗೂ ಆಗುವ ಷೋಡಶಸಂಸ್ಕಾರಗಳಿಂದ ಕೂಡಿ ವಿಧಿವಾಕ್ಯಗಳಿಂದ ಬದ್ಧವಾದ ಮನುಷ್ಯದೇಹವೇ ಗೋಕುಲವು. (ಗೋ ಸಮೂಹದಿಂದ ಕೂಡಿದ ಹಳ್ಳಿಯನ್ನು ಗೋಕುಲವೆನ್ನುವರು. ಹಾಗೆಯೇ ವಿಧಿವಾಕ್ಯಸಮೂಹದಿಂದ ಕೂಡಿದ ಈ ದೇಹಕ್ಕೂ ಗೋಕುಲವೆಂದು ಹೆಸರು.)

**ಗೋವುಗಳು:-** ಶೃತಿಸ್ಮೃತಿವಾಕ್ಯಗಳು.

**ಗೋಪಾಲಕರು:-** ಮೇಲಿನ ವಾಕ್ಯಗಳನ್ನು ಪಾಲಿಸುವ ಈ ದೇಹದೊಳಗಿನ ತತ್ತ್ವಾಭಿಮಾನಿದೇವತೆಗಳು.

**ಗೋಪಿಕಾಸ್ತ್ರೀಯರು:-** ಇಂದ್ರಿಯವೃತ್ತಿಗಳು ಅಂದರೆ-ಕಣ್ಣು, ಕಿವಿ ಮೊದಲಾದ ಜ್ಞಾನೇಂದ್ರಿಯಗಳಿಗೆ ಮನೋಬುದ್ಧಿಸಂಯೋಗದಿಂದ ಅನೇಕ ವಿಧವಾದ ವೃತ್ತಿಗಳು ಹುಟ್ಟುವುವು. ಅದರಲ್ಲೂ ಮನೋವೃತ್ತಿ, ಬುದ್ಧಿವೃತ್ತಿ, ಚಿತ್ತವೃತ್ತಿ ಎಂದು ಮೂರುವಿಧವಾದ ಭೇದಗಳಿರುವುವು. ಮನೋವೃತ್ತಿಯೆಂದರೆ, - ಇಲ್ಲಿ ಇವತ್ತು ನಾಟಕ! ನೋಡೋದಕ್ಕೆ ಹೋಗೋಣವೇ, ಛಿ! ದುಡ್ಡು ಖರ್ಚು ಬೇಡ, ಉಂ ಮನಸ್ಸುನಿಲ್ಲದು, ಎಂದು ಹುಟ್ಟುವ ಚಂಚಲ ವೃತ್ತಿಯೇ ಮನೋವೃತ್ತಿಯು.

'ಬೇಕಾದ್ದಾಗಲೀ! ಇವತ್ತು ನಾಟಕಕ್ಕೆ ಹೋಗೇ ಹೋಗುವೆನು!' ಎಂದು ನಿಶ್ಚಯಭಾವವೇ ಬುದ್ಧಿವೃತ್ತಿಯು.

' ಇವತ್ತು ದೇವರದರ್ಶನಕ್ಕೆ ಹೋಗಬೇಕು, ಪೂಜೆ ಮಾಡಬೇಕು' ಎಂಬಿವೇ ಮೊದಲಾದ ಸದ್ ವೃತ್ತಿಗಳೇ ಚಿತ್ತವೃತ್ತಿಯು. ಇವು ಕಣ್ಣು, ಮೂಗು, ಕಿವಿ, ನಾಲಿಗೆ, ಚರ್ಮ ಇವುಗಳ ಸಂಬಂಧದಿಂದ ನೋಡುವುದು, ಆಘ್ರಾಣಿಸುವುದು, ಕೇಳುವುದು, ತಿನ್ನುವುದು, ಭೋಗಿಸುವುದು. ಇವುಗಳಲ್ಲಿ ಮನೋವೃತ್ತಿ( ಚಂಚಲವೃತ್ತಿ) , ಬುದ್ಧಿವೃತ್ತಿ( ನಿಶ್ಚಯವೃತ್ತಿ) , ಚಿತ್ತವೃತ್ತಿ( ಸದ್‌ವೃತ್ತಿ) ಈ ಭೇದಗಳಿಂದ ಅನೇಕ ವೃತ್ತಿಭೇದಗಳು ಆಗುವುವು. ಇವುಗಳಲ್ಲಿ ಮನೋವೃತ್ತಿ ಮತ್ತು ಬುದ್ಧಿವೃತ್ತಿಗಳೇ ಗೋಪಿಕಾಸ್ತ್ರೀಯರು.

**ಕೃಷ್ಣ:-** ಪರಮಾತ್ಮನು.

**ಯಮುನಾ:-** ಮಾಯಾ ಎಂದರೆ ಸೃಷ್ಟಿ, ಸ್ಥಿತಿ, ಸಂಹಾರರೂಪವಾಗಿ ಅನಾದಿಕಾಲದಿಂದಲೂ ಪ್ರವಾಹರೂಪದಿಂದ ಜೀವನನ್ನಾವರಿಸಿರುವ ಭಗವದಿಚ್ಛಾ ಶಕ್ತಿಯು.

**ವನ:-** ಮನಸ್ಸು.

ಉಳಿದಪಾತ್ರಗಳನ್ನು ಕಥಾ ಸಂದರ್ಭದಲ್ಲಿ ಹೇಳುತ್ತೇವೆ. ಭಕ್ತಶಿರೋಮಣಿಗಳಾದ ಭ್ರಾತೃಭಗಿನಿಯರೇ! ಈಗ ದಯವಿಟ್ಟು ಉಪೋದ್ಘಾತದ

ಕಡೆಗೆ ಲಕ್ಷ್ಯವಿಡುವುದನ್ನು ಮಾತ್ರ ಮರೆಯಬೇಡಿ।

ಈ ದೇಹ(ಗೋಕುಲ) ದಲ್ಲಿ ಇಂದ್ರಿಯವೃತ್ತಿಗಳು (ಗೋಪಿಯರು) ತಂತಮ್ಮ ಕೆಲಸಗಳೆಂದರೆ ಪ್ರವೃತ್ತಿ ಸಂಬಂಧವಾಗಿ, ಕೇಳುವುದೂ, ನೋಡುವುದೂ ಮೊದಲಾದ ವಿಷಯಸುಖದಲ್ಲಿ ಆಸಕ್ತವಾಗಿದ್ದವು. ಆಗ ವೇಣುಗಾನ ಅಂದರೆ ವೇದಸ್ವರೂಪಳಾದ ದುರ್ಗಾದೇವಿಯೇ ವೇಣುಸ್ವರೂಪಳು. ಅದರಿಂದ ಹುಟ್ಟಿದ ಧ್ವನಿ ಎಂದರೆ **ಅಪರೋಕ್ಷಜ್ಞಾನಕ್ಕೆ ಸಾಧನವಾದ ನಿವೃತ್ತಿಮಾರ್ಗವು(ಗಾಳಿಯಿಂದ ಕೇಳಿಬರುವಂತೆ) ಚಿತ್ತಾಭಿಮಾನಿಯಾದ ವಾಯುದೇವರಿಂದ ಪ್ರೇರಿತವಾಯಿತು**. ಆಗ ಇಂದ್ರಿಯವೃತ್ತಿಗಳ(ಕಥೆಯಲ್ಲಿ ಗೋಪಿಯರು) ಪ್ರವೃತ್ತಿವಿಷಯಾಸಕ್ತಿಗಳನ್ನು (ಕೆಲಸಗಳನ್ನು) ಮರೆತು ನಿವೃತ್ತಿಮಾರ್ಗವನ್ನು ಹಿಡಿದು ಭಗವದಿಚ್ಛೆಯೆಂಬ ಯಮುನಾದಲ್ಲಿ ಸತ್ವಗುಣವೆಂಬ ಚಂದ್ರಿಕೆಯಿಂದ ಪ್ರಕಾಶಮಾನವಾಗಿ ಕಂಗೊಳಿಸುತ್ತಿರುವ ಮನಸ್ಸೆಂಬ ವನದಲ್ಲಿ ಅಂದರೆ ಹೃದಯಮಧ್ಯದಲ್ಲಿ ಶ್ರೀಕೃಷ್ಣನನ್ನು ಅಂದರೆ ನೀಲಮೇಘದಂತೆ ಶೋಭಿಸುತ್ತಿರುವ (ಪ್ರಕಾಶಿಸುತ್ತಿರುವ) ಪರಮಾತ್ಮನನ್ನು ಅಪರೋಕ್ಷದಲ್ಲಿ ಕಂಡು ಅಂಗಸಂಗ ಅಂದರೆ ಶ್ರೀಪರಮಾತ್ಮನಲ್ಲಿ ತಮ್ಮ ಭಾವಗಳನ್ನು ಲಯಿಸಿ ಏಕೀಭಾವವನ್ನು ಹೊಂದಿದವು. **ಅಷ್ಟರಲ್ಲಿ ಈ ಇಂದ್ರಿಯವೃತ್ತಿಗಳನ್ನು ಅಹಂಕಾರತತ್ವವು ಆವರಿಸಿತು.** ತಕ್ಷಣ ಅಪರೋಕ್ಷದಲ್ಲಿ ಕಾಣುತ್ತಿದ್ದ ಪರಮಾತ್ಮನು ಕಾಣದಾದನು. ಒಬ್ಬ ಗೋಪಿಯು ಮಾತ್ರ ಕೃಷ್ಣನನ್ನು ಅನುಸರಿಸಿ ಹೋದಂತೆ ಒಂದು ಚಿತ್ತವೃತ್ತಿಯು ಮಾತ್ರ ಪರಮಾತ್ಮನನ್ನು ಬಿಡಲಿಲ್ಲ. ಆದರೇನು! ಇಂದ್ರಿಯ ವೃತ್ತಿಗಳನ್ನು ಬಿಟ್ಟು ಒಂದು ಚಿತ್ತವೃತ್ತಿಯು ಎಷ್ಟು ಹೊತ್ತು ಇರಲಾದೀತು! ಆ ಮನೋವನದಲ್ಲಿ ಸತ್ವಗುಣವೆಂಬ ಚಂದ್ರಿಕೆಯನ್ನು ರಜೋಗುಣ, ತಮೋಗುಣಗಳೆಂಬ ವೃಕ್ಷಾದಿಗಳು ಆವರಿಸಿ ಅಲ್ಲಲ್ಲಿ ಕತ್ತಲು ಬಿದ್ದಿದ್ದಿತು. ಚಿತ್ತವೃತ್ತಿಯು ಯಾವಾಗಲೂ ಸದ್ ವೃತ್ತಿಯಲ್ಲಿಯೇ ಇರುವುದಾದರೂ ಅಹಂಕಾರಾದಿಗಳ ಆವರಕದಿಂದ ಪರಮಾತ್ಮನನ್ನೂ ಕಾಣದಂತಾಯಿತು. ಮತ್ತು ರಜಸ್ತಮೋಗುಣಾವರಕದಲ್ಲೂ ಪೂರ್ಣವಾಗಿ ಬೀಳದೇ ಗೋಪಿಯು ಗಿಡದಲ್ಲಿ ಜೋಲಾಡಿದಂತೆ ಮಧ್ಯದಲ್ಲಿ ಡೋಲಾಯಮಾನವಾಗಿದ್ದಿತು. ಇತ್ತಲಾ ಇಂದ್ರಿಯವೃತ್ತಿಗಳು ಪರಮಾತ್ಮನನ್ನು ಕಾಣದೇ ಮನೋವನದಲ್ಲಿ ಸತ್ವಗುಣದ ಚಂದ್ರಿಕೆಯನ್ನು ರಜಸ್ತಮೋಗುಣಗಳೆಂಬ ವೃಕ್ಷಗಳ ನೆರಳಿನಲ್ಲಿ ಅಂದರೆ ಅಜ್ಞಾನಾಂಧಕಾರದಲ್ಲಿ ತಲ್ಲಣಿಸುತ್ತಾ ಆಗಾಗ ತೋರುತ್ತಿರುವ ಸತ್ವಗುಣಪ್ರಕಾಶದಲ್ಲಿ(ಗೋಪಿಯರು ಬೆಳದಿಂಗಳಿನಲ್ಲಿ ಹೆಜ್ಜೆಗಳನ್ನು ಕಂಡಂತೆ) ಅಪರೋಕ್ಷಪದವನ್ನು ಅಂದರೆ ಸೂಚನೆಯನ್ನು ಕಾಣುತ್ತಾ ಕಡೆಗೆ ರಜೋವೃಕ್ಷದಲ್ಲಿ ಜೋಲಾಡುತ್ತಿದ್ದ ಚಿತ್ತವೃತ್ತಿಯನ್ನು ತಮ್ಮ ಸ್ವಾಧೀನಪಡಿಸಿಕೊಂಡು ಮೊದಲಿನಂತೆ ಸತ್ವಗುಣಚಂದ್ರಿಕೆಯಲ್ಲಿ ಪ್ರಕಾಶಮಾನವಾದ ಮನೋವನದಲ್ಲಿ ಪರಮಾತ್ಮನನ್ನು ಧ್ಯಾನಿಸುತ್ತಿರಲು ಶ್ರೀಪರಮಾತ್ಮನು ಮನ್ಮಥನನ್ನು ಧಿಕ್ಕರಿಸುವ ದಿವ್ಯರೂಪವನ್ನು ಅಪರೋಕ್ಷದಲ್ಲಿ ತೋರಿದನು. ಇಂದ್ರಿಯವೃತ್ತಿಗಳು ಆಗ ಪರಮಾನಂದಭರಿತರಾಗಿ ಪೂರ್ವದಂತೆ ಏಕೀಭಾವವನ್ನು ಹೊಂದಿದರೆಂದು ಶುಭಂ॥

॥ಸಮಾಪ್ತವಾದುದು॥ ಶ್ರೀಮದ್ವೇಶಾರ್ಪಣಮಸ್ತು॥

(ಇದನ್ನು ಈ ಹಿಂದೆ ಪ್ರಕಟಿಸಿದ ಶ್ರೀಮೂರ್ತಿರಾಯರಿಗೆ, ಶ್ರೀಪದ್ಮನಾಭದಾಸರಿಗೆ ನಮಸ್ಕಾರಗಳು.
ಶ್ರೀರಾಘವೇಂದ್ರರಿಗೆ, ಶ್ರೀಭಾವೀಸಮೀರ ವಾದಿರಾಜರಿಗೆ, ಶ್ರೀಮಧ್ವಾಚಾರ್ಯರಿಗೆ ನಮಸ್ಕಾರಗಳು.
ಶ್ರೀಸ್ವೋತ್ತಮಗುರುಗಳಂತರ್ಗತ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವಾಂತರ್ಯಾಮಿನ್ ಶ್ರೀಕೃಷ್ಣನಿಗೆ ನಮಸ್ಕಾರಗಳು .
ಇದನ್ನು ಸಹೃದಯದಿಂದ ಓದುವ ನಿಮಗೆಲ್ಲರಿಗೂ ನಮಸ್ಕಾರಗಳು.)

**ಶರ್ವಾದಿ ಸರ್ವಗೀರ್ವಾಣ ನಿರ್ವಾಣಗತಿಹೇತವಃ ।**
**ಪೂರ್ಣಪ್ರಜ್ಞಪದಾಂಭೋಜಪಾಂಸವಃ ಪಾಂತು ನಃ ಸದಾ ॥**
**ಶ್ರೀಹರಿಭಕ್ತಿದಯಾಂಬೋಧಿತರಲಕ್ರೀಡನೋತ್ಸುಕಃ ।**
**ಗುರವೋ ವಾದಿರಾಜಾರ್ಯಾಃ ಕರುಣಾಂ ವಿತರಂತು ಮೇ ॥**
**ಮೂಕೋಪಿ ಯತ್ಪ್ರಸಾದೇನ ಮುಕುಂದಶಯನಾಯತೇ ।**
**ರಾಜರಾಜಾಯತೇರಿಕ್ತಃ ರಾಘವೇಂದ್ರಂ ತಮಾಶ್ರಯೇ ॥**

(ಇದನ್ನು ಸಜ್ಜನರಿಗಾಗಿ ಗಣಕೀಕರಿಸಲಾಗಿದೆ. ಅವಕಾಶವಾದಲ್ಲಿ ಪ್ರತಿಯನ್ನು ಮಾಡಿ ಹಂಚಿರಿ)